ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಚಿಂತಾಮಣಿ ಯಲ್ಲಿ ಬಾಲಕಿಯರ ಮಾಧ್ಯಮಿಕ ಶಾಲಾ ಕಟ್ಟಡವನ್ನು ಎಲ್ಲಿ ಕಟ್ಟಬೇಕೆಂದು ಗೊತ್ತು ಮಾಡಿದ್ದಾರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲಿರುವ ಮುನ್ಸಾಫರ್ ಖಾನೆಯ ಹಿಂಭಾಗದಲ್ಲಿ ಕಟ್ಟಬೇಕೆಂದು ಗೊತ್ತುಮಾಡಲಾಗಿದೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಮಹಿಳಾ ಸಮಾಜದ ಎದುರಿಗಿರುವ ಸ್ಥಳದಲ್ಲಿ ದುಡ್ಡನ್ನು ಕೊಟ್ಟು ಆ ಸ್ಥಳವನ್ನು ತೆಗೆದುಕೊಂಡು, ಅಲ್ಲಿ ಈ ಪಾಠಶಾಲೆಯನ್ನು ಕಟ್ಟಿಸಬೇಕೆಂದು ನಿರ್ಧರಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮುನಿಸಿಪಾಲಿಟಿಯವರು ದುಡ್ಡನ್ನು ಕೊಡುವುದಕ್ಕೆ ನಮಗೆ ಕಷ್ಟವಾಗಿದೆಯೆಂದು ತಿಳಿಸಿದ್ದಾರೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಅಲ್ಲಿ ಕೆಲಸ ಪ್ರಾರಂಭವಾಗಿದೆಯೇ ?

1 P.M

Sri A. G. RAMACHANDRA RAO.—That is our report.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಬಸ್‌ಸ್ಟ್ಯಾಂಡು ಮತ್ತು ಸರ್ಕಲ್ಲು ಅಲ್ಲಿರುವುದರಿಂದ ಹೆಣ್ಣು ಮಕ್ಕಳ ಸ್ಕೂಲು ಕಟ್ಟುವುದಕ್ಕೆ ಅಲ್ಲಿ ಸ್ಥಳ ಯೋಗ್ಯವಾಗಿಲ್ಲವೆಂದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಸ್‌ಸ್ಟ್ಯಾಂಡ್ ಇದ್ದರೆ ಯೋಗ್ಯವಲ್ಲವೆಂದು ತಿಳಿದು, ಬಸ್‌ಸ್ಟ್ಯಾಂಡನ್ನೇ ಬೇರೆ ಕಡೆಗೆ ವರ್ಗಾಯಿಸಬೇಕೆಂದು ಮಾಡಿದೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಬಸ್‌ಸ್ಟ್ಯಾಂಡನ್ನು ಬೇರೆ ಕಡೆಗೆ ವರ್ಗಾಯಿಸಬೇಕೆಂದಿದ್ದಾರೆಂದು ಹೇಳಿದರಿ. ಈಗ ಅದಕ್ಕೆ ಬದಲು ಅಲ್ಲಿಯೇ ಬಸ್‌ಸ್ಟ್ಯಾಂಡ್ ಪ್ಲೇಟಿಂಗ್ ರೂಮುಗಳನ್ನು ಕಟ್ಟುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈ ರೀತಿ ಅವರು ದುಡ್ಡು ಕೊಡದಿರುವುದರಿಂದ ಕಟ್ಟಡವನ್ನು ಅಲ್ಲೇ ಕಟ್ಟಬೇಕೆಂದು ಅಭಿಪ್ರಾಯವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ. ದುಡ್ಡು ಕೊಟ್ಟು ಬೇರೆ ಕಡೆ ಕಟ್ಟಬಹುದೆಂದು ಹೇಳಿದರೆ ಪರವಾಗಿಲ್ಲ, ಕಟ್ಟಿಸಿಕೊಡುತ್ತೇವೆ.

---

## SHORT NOTICE QUESTION AND ANSWER.

*Fire accident in Ramappanahatti in Chiknaikanahalli Taluk.*

*Q.*—14. Sri C. H. LINGADEVARU (Chiknaikanhalli).—

Will the Government be pleased to state :—

(*a*) whether they are aware of the report which appeared in the Local Newspapers to the effect that fire broke out in Ramappanahatti in Chiknaikanahalil Taluk on 21st March 1953 ;

(*b*) whether it is a fact that 60 houses were thereby burnt ;

(*c*) the immediate relief they have afforded to the people affected ?

*A.*—Sri KADIDAL MANJAPPA (Minister for Revenue and Public Works).—

(*a*) Yes.

(*b*) Fifty-nine families suffered on account of accident.

(*c*) A cash grant of Rs. 980 has been sanctioned by the Deputy Commissioner, as permissible under the rules. As part of Relief Works, repairs of two gokattas have been undertaken to provide labour and money to sufferers.

ಶ್ರೀ ಸಿ. ಎಚ್. ಲಿಂಗದೇವರು.—ಈ ಬೆಂಕಿ ಅನಾಹುತದಲ್ಲಿ ಪ್ರಾಣಹಾನಿಯೇನಾದರೂ ಆಗಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಜನರ ಹಾನಿ ಏನೂ ಆಗಿಲ್ಲ.

ಶ್ರೀ ಸಿ. ಎಚ್. ಲಿಂಗದೇವರು.—ಜಾನುವಾರುಗಳ ಹಾನಿ ?

ಶ್ರೀ ಕಡಿದಾಳ್ ಮಂಜಪ್ಪ.—14 ಜಾನುವಾರುಗಳು ಸತ್ತುಹೋಗಿವೆ. ಕೆಲವು ಕರೆನ್ಸಿ ನೋಟುಗಳು ಸುಟ್ಟು ಹೋದವು. 59 ಗುಡಿಸಲುಗಳೂ, ಅವುಗಳಲ್ಲಿದ್ದ ದವಸ ಮತ್ತು ಇತರ ಸಾಮಗ್ರಿಗಳೂ ಸುಟ್ಟು ಹೋಗಿವೆಯೆಂದು ಗೊತ್ತಾಗಿದೆ.

ಶ್ರೀ ಸಿ. ಎಚ್. ಲಿಂಗದೇವರು.—ಒಟ್ಟು ಎಷ್ಟು ನಷ್ಟವಾಗಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಸಿ. ಎಚ್. ಲಿಂಗದೇವರು.—ನುಮಾರು 70-80 ಸಾವಿರ ರೂಪಾಯಿಗಳ ಮಾಲುಗಳು ನಷ್ಟವಾಗಿವೆಯೆಂದು ಹೇಳಿದರೆ ಒಪ್ಪುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಸಿ. ಎಚ್. ಲಿಂಗದೇವರು.—ಪ್ರತಿ ಸಂಸಾರಕ್ಕೂ ಎಷ್ಟು ಪರಿಹಾರ ಕೊಟ್ಟಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—Detailed report ಇನ್ನೂ ಬಂದಿಲ್ಲ, ಬಂದ ನಂತರ ಹೇಳುತ್ತೇನೆ.

ಶ್ರೀ ಸಿ. ಎಚ್. ಲಿಂಗದೇವರು.—ಮೊದಮೊದಲು ಪರಿಹಾರ ಕೊಟ್ಟವರಿಗೆ 1,450 ರೂಪಾಯಿಗಳನ್ನು ಕೊಡುವುದಕ್ಕೂ ಕೊನೆ ಕೊನೆಗೆ ಕೊಟ್ಟವರಿಗೆ 950 ರೂಪಾಯಿಗಳನ್ನು ಮಾತ್ರ ಕೊಡುವುದಕ್ಕೂ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರಗಳನ್ನು ಈಗ ಹೇಳುವುದಕ್ಕಾಗುವುದಿಲ್ಲ. Detailed report ಬಂದಿಲ್ಲ.

ಶ್ರೀ ಸಿ. ಎಚ್. ಲಿಂಗದೇವರು.—ರೂರ್ಸ್‌ಪ್ರಕಾರ ಒಂದು ಸಂಸಾರಕ್ಕೆ ಎಷ್ಟು ಪರಿಹಾರ ಕೊಡಬೇಕೆಂದಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಈ ವಿಚಾರದಲ್ಲಿ ಡೆಪ್ಯುಟಿ ಕಮಿಷನರ ಅಧಿಕಾರ, ರೆವಿನ್ಯೂ ಕಮಿಷನರ ಅಧಿಕಾರ, ಸಬ್ ಡಿವಿಜ಼ನ್ ಆಫೀಸರ ಅಧಿಕಾರ ಬೇರೆ ಬೇರೆ ರೀತಿಯಾಗಿದೆ ಆದ್ದರಿಂದ ಪರಿಹಾರ ಕೊಡುವುದು ಸಮಯ ಸಂದರ್ಭದ ಮೇರೆ ಹೋಗುತ್ತದೆ.

ಶ್ರೀ ಸಿ. ಎಚ್. ಲಿಂಗದೇವರು.—ಸಾಮಾನ್ಯವಾಗಿ ಡೆಪ್ಯುಟಿಕಮಿಷನರು ಒಂದು ಸಂಸಾರಕ್ಕೆ ಎಷ್ಟು ಪರಿಹಾರ ಕೊಡಬಹುದೆಂದಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಇಷ್ಟೇ ಎಂದು ನಿಗದಿಯೇನೂ ಮಾಡಿಲ್ಲ; ಸಮಯ ಸಂದರ್ಭದ ಮೇರೆ ಹೋಗುತ್ತದೆ.

ಶ್ರೀ ಸಿ. ಎಚ್ ಲಿಂಗದೇವರು.—'As permissible under rules' ಪರಿಹಾರ ಕೊಟ್ಟಿದೆಯೆಂದು ಹೇಳಿದ್ದೀರಿ. ಈಗ ಅವರ ಅಧಿಕಾರವ್ಯಾಪ್ತಿಯಲ್ಲಿ ಎಲ್ಲಿಯವರೆಗೆ ಕೊಟ್ಟಿದೀರಿ, ಅಲ್ಲಿ ಪ್ರತಿ ಸಂಸಾರದ ವರಿಗೂ ಎಷ್ಟೆಷ್ಟು ಕೊಟ್ಟಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರಗಳನ್ನೆಲ್ಲಾ ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಸಿ. ಹೆಚ್. ಲಿಂಗದೇವರು.—ಈ ನಿಬಂಧನೆಗಳನ್ನು ಮಾಡಿದ್ದು ಯಾವ ಕಾಲದಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್ ಬೇಕು.

ಶ್ರೀ ಸಿ. ಎಚ್ ಲಿಂಗದೇವರು.—ಈಗ ಧಾರಣೆ ವಾಸಿಗಳು ಹೆಚ್ಚಾಗಿರುವ ಈ ಕಾಲದಲ್ಲಿ. ನೀವು ಕೊಡತಕ್ಕ ಪರಿಹಾರ ಬಹಳ ಕಡಮೆಯೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ವಿವರವಾಗಿ ವರದಿ ಬಂದ ನಂತರ ಏನು ಪರಿಹಾರ ಕೊಡುವುದಕ್ಕೆ ಸಾಧ್ಯವೆಂಬುದನ್ನು ರೂಲ್ಸ್ ಪ್ರಕಾರ ಯೋಚನೆ ಮಾಡುತ್ತೇವೆ.

ಶ್ರೀ ಸಿ. ಎಚ್. ಲಿಂಗದೇವರು.—ಈಗ ಕೊಟ್ಟಿರುವ ಪರಿಹಾರವನ್ನೂ ಇನ್ನೂ ಹೆಚ್ಚಿಗೆ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಯೋಚನೆ ಮಾಡುತ್ತೇವೆಂದು ಆಗಲೇ ಹೇಳಿದೆ.

---

## QUESTIONS FOR ANSWERS ON THE DAY.

*(But not taken up)*

*Grant and loan by the Centre for supply of power to lift irrigation.*

*Q.*—77. Sri B. C. NANJUNDAIYA (Kora).—

Will the Government be pleased to state :—

(*a*) the total amount received from Central Government during 1952-53 by way of loan and by way of grant to supply power for irrigation pumps in the State ;

(*b*) the amount allotted by the State Government for the above during 1952-53 ;

(*c*) the amount sanctioned for the above works, districtwar for 1952-53 ;

(*d*) the amount actually spent till the end of February 1953 (figures may kindly be given districtwar) ;

(*e*) the names and number of estimates that are sanctioned and pending execution in the Electrical Department till the end of February 1953 (figures may kindly be given districtwar) ?

*A.*—Sri K. HANUMANTHAIYA (Chief Minister).—

(*a*) Rupees 50 lakhs by way of loan.

(*b*) Rupees 50 lakhs.

(*c*)

| *District* | *Amount* Rs. |
|---|---|
| Bangalore .. | 3,00,000 |
| Mysore .. | 2,00,000 |
| Kolar .. | 5,00,000 |
| Chitaldrug .. | 11,77,000 |
| Mandya .. | 1,00,000 |
| Chikmagalur .. | 2,50,260 |
| Tumkur .. | 9,94,000 |
| Hassan .. | 3,50,000 |
| Shimoga .. | 9,56,357 |